ನೀರು/ಶೌಚಾಲಯ ವ್ಯವಸ್ಥೆ, ಪ್ರವಾಸಿ ಮಾಹಿತಿ ಕೇಂದ್ರ ಡ್ರೆಸ್ ಕ್ಯೂಬಿಕಲ್ಸ್, ಸೈನೇಜ್ ಫಲಕಗಳನ್ನು ಅಳವಡಿಸಲು ಹಾಗೂ 320.00ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಪ್ರಸ್ತುತ ಬಾದಾಮಿಯಲ್ಲಿರುವ ಪ್ರವಾಸಿ ಸೌಲಭ್ಯವನ್ನು ಉನ್ನತೀಕರಿಸಲು ರಸ್ತೆಗಳನ್ನು ನಿರ್ಮಿಸಲು ಭೂತನಾಳ ಕೆರೆಯ ಹುಳೂ ತೆಗೆಯುವುದು, ಸೈನೇಜ್ ಬೋರ್ಡ್‌ಗಳನ್ನು ಅಳವಡಿಸುವುದು ಮುಂತಾದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಹಂತ ಹಂತವಾಗಿ ಪೂರ್ತಿಗೊಳಿಸಲಾಗುವುದು. ಕಾಮಗಾರಿ ಗಳನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

26, (96) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ): ಮಾನ್ಯ ಪ್ರವಾಸೋದ್ಯಮ ಮತ್ತು ಜವಳಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬಾಗಲಕೋಟೆ ಜಿಲ್ಲೆಯ ಬಾದಾಮಿ, ಪಟ್ಟದಕಲ್ಲು ಹಾಗೂ ಐಹೊಳೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರವಾಸಿ ಮಾರ್ಗದರ್ಶಿ (Tourist Guide) ಗಳಿಗೆ ಗೌರವಧನವಾಗಲಿ ಅಥವಾ ಸರ್ಕಾರದ ಯಾವ ಸವಲತ್ತುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರವಾಸಿಗಳು ಇಲ್ಲದ ಕಾಲದಲ್ಲಿ ಪ್ರವಾಸಿ ಮಾರ್ಗದರ್ಶಿಗಳ (Tourist Guide) ನಿರ್ವಹಣೆ ತೊಂದರೆದಾಯಕವಲ್ಲವೆ;

ಇ) ಹಾಗಿದ್ದಲ್ಲಿ, ಕಡಿಮೆ ಸಂಖ್ಯೆಯಲ್ಲಿರುವ ಈ ಪ್ರವಾಸಿ ಮಾರ್ಗದರ್ಶಿಗಳ ಜೀವನ ನಿರ್ವಹಣೆಗೆ ಕೆಲಸದ ಭದ್ರತೆಗೆ ಸರ್ಕಾರ ಕೂಡಲೇ ಗೌರವಧನವಾಗಲಿ ಅಥವಾ ಇತರೆ ಸವಲತ್ತುಗಳಿಗಾಗಿ ಕ್ರಮ ತೆಗೆದುಕೊಳ್ಳಲಾಗುವುದೇ;

ಶ್ರೀ ಬಿ. ಶ್ರೀರಾಮುಲು ಪ್ರವಾಸೋದ್ಯಮ ಮತ್ತು ಜವಳಿ ಸಚಿವರು

ಅ) ಪ್ರವಾಸಿ ಮಾರ್ಗದರ್ಶಿಗಳಿಗೆ ಗೌರವಧನ ಅಥವಾ ಸರ್ಕಾರದ ಸವಲತ್ತುಗಳನ್ನು ನೀಡಲು ಅವಕಾಶವಿರುವುದಿಲ್ಲ. ಮಾರ್ಗದರ್ಶಿ ತರಬೇತಿ ಮಾರ್ಗದರ್ಶನ ನೀಡಲು ಪರವಾನಗಿ ನೀಡಲಾಗಿದೆ. ಇದು ಮಾರ್ಗದರ್ಶಿ ಗಳಾಗಿ ಕರ್ತವ್ಯ ನಿರ್ವಹಿಸುವ ಅವರ ದಕ್ಷತೆಯನ್ನು ಗುರುತಿಸಲು ಕೈಗೊಂಡ ಕ್ರಮವಾಗಿದೆ. ಇದು ಖಾಸಗಿ ವೈಯಕ್ತಿಕ ಚಟುವಟಿಕೆ ಆಗಿದ್ದು, ಪ್ರವಾಸಿಗರಿಗೆ

ಇವರು ಒದಗಿಸುವ ಸೇವೆಗೆ ಪ್ರತಿಫಲವಾಗಿ ಪ್ರವಾಸಿಗರಿಂದ ಶುಲ್ಕ ಪಡೆಯುತ್ತಾರೆ.

ಆ) ಮಾರ್ಗದರ್ಶಿಯಾಗಿ ಕೆಲಸ ನಿರ್ವಹಿಸುವುದು ಖಾಸಗಿ ವೈಯಕ್ತಿಕ ದಕ್ಷತೆ ಹಾಗೂ ಕಾರ್ಯ ತತ್ಪರತೆ ಮೇಲೆ ಅವಲಂಬಿಸಿದೆ.

ಇ) ಇದು ಖಾಸಗಿ ವೈಯಕ್ತಿಕ ಚಟುವಟಿಕೆ ಆಗಿದ್ದು, ಗೌರವಧನವನ್ನಾಗಲಿ ಅಥವಾ ಇತರೆ ಸವಲತ್ತು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(27) 5 ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗದಗ ತಾಲ್ಲೂಕಿನ ಲಕ್ಕುಂಡಿ ಉತ್ಸವ ಈ ವರ್ಷ ಯಾವ ತಿಂಗಳಲ್ಲಿ ಮಾಡಲಾಗುವುದು;

ಆ) ಅತ್ತಿಮಬ್ಬೆ ಪ್ರಶಸ್ತಿಯನ್ನು ಹಿಂದಿನಂತೆ ಈ ವರ್ಷವೂ ಲಕ್ಕುಂಡಿಯಲ್ಲಿ ವಿತರಣೆ ಮಾಡಲಾಗುವುದೇ ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಲಕ್ಕುಂಡಿ ಉತ್ಸವವನ್ನು ಏಪ್ರಿಲ್ 2006ರಲ್ಲಿ ನಡೆಸಲು ಜಿಲ್ಲಾ ಆಡಳಿತವು ಉದ್ದೇಶಿಸಿದೆ.

ಆ) ಈ ಪ್ರಶಸ್ತಿಯನ್ನು ಇಲಾಖೆಯಲ್ಲಿ ನೀಡುತ್ತಿರುವ ಇತರೆ ಹತ್ತು ಪ್ರಶಸ್ತಿಗಳ ಜೊತೆಯಲ್ಲಿ ಬೆಂಗಳೂರಿನಲ್ಲಿ ನೀಡುತ್ತಾ ಬರಲಾಗುತ್ತಿದೆ. ಈ ಹಿಂದೆ ಲಕ್ಕುಂಡಿ ಉತ್ಸವ ಸಂದರ್ಭದಲ್ಲಿ 1998ರಲ್ಲಿ ಡಾ: ಕಮಲಾ ಹಂಪನಾ ಅವರಿಗೆ, 2001ರಲ್ಲಿ ಸಾರಾ ಅಬೂಬಕರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

28, (6) ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ) : ಮಾನ್ಯ ಪ್ರವಾಸೋದ್ಯಮ ಮತ್ತು ಜವಳಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗದಗ ತಾಲ್ಲೂಕು ಲಕ್ಕುಂಡಿಯನ್ನು ಪ್ರವಾಸೋದ್ಯಮದಲ್ಲಿ ಸೇರಿಸಿ ಇದನ್ನು ಅಭಿವೃದ್ಧಿ ಪಡಿಸಲು ಏನೇನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಎಷ್ಟು ಹಣ ನಿಗಧಿ ಮಾಡಲಾಗಿದೆ ?

ಶ್ರೀ ಬಿ. ಶ್ರೀರಾಮುಲು ಪ್ರವಾಸೋದ್ಯಮ ಮತ್ತು ಜವಳಿ ಸಚಿವರು

ಅ) ಗದಗ್ ಜಿಲ್ಲೆ, ಗದಗ್ ತಾಲ್ಲೂಕಿನ ಲಕ್ಕುಂಡಿಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೆಳಕಂಡ ಸೌಲಭ್ಯಗಳನ್ನು ನಿರ್ಮಿಸಲು ಕ್ರಮ ಜರುಗಿಸಲಾಗಿದೆ.